**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ನಂಃ- 46-15**

(ಪ್ರಾ.ಸಾ.-22 ಚಾ.ಸಾ.-22)

ತಾಃ 25-04-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು ಃ ಎಂ ಬಾಲಾಜಿ

ತಂದೆಯ ಹೆಸರು ಃ ಮುನಿವೆಂಕಟಪ್ಪ
ವಯಸ್ಸು ಃ 38 ವರ್ಷ
ಉದ್ಯೋಗ ಃ ಪಿ ಎಸ್ ಐ, ದೊಡ್ಡಬಳ್ಳಾಪುರ ಗ್ರಾಮಾಂತರ ಪೋಲೀಸ್ ಠಾಣೆ
ವಾಸ ಸ್ಥಳ ಃ ದೊಡ್ಡಬಳ್ಳಾಪುರ

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

ನಾನು ಸೆಪ್ಟೆಂಬರ್ 2013 ರಿಂದ ಫೆಬ್ರವರಿ 2016 ರವರೆಗೆ ದೊಡ್ಡಬೆಳವಂಗಲ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 24-02-2014 ರಂದು ಪಿ ಸಿ ಬಕ್ಕಲ್ ನಂಬರ್ 1376- ಹುಸೇನ್ ಸಾಬ್ ಇವರು ಒಂದು ಸ್ಕೂಟರ್, ಇಬ್ಬರು ಆರೋಪಿಗಳಾದ ಕೃಷ್ಣ, ರಾಜೇಶ್ ಇವರನ್ನು ವರದಿಯೊಂದಿಗೆ ಹಾಜರುಪಡಿಸಿದರು. ವರದಿಯನ್ನು ಪರಿಶೀಲಿಸಿ ಠಾಣಾ ಮೊಕದ್ದಮೆ ಸಂಖ್ಯೆ 48/14ಕ್ಕೆ ಸಿ.ಆರ್.ಪಿ.ಸಿ ಕಲಂ 41(ಡಿ)

ಮತ್ತು 102 ಜೊತೆ ಭಾರತೀಯ ದಂಡ ಸಂಹಿತೆ ಕಲಂ 379ರ ಅಡಿ ಪ್ರಕರಣ ದಾಖಲಿಸಿಕೊಂಡು ಎಫ್.ಐ.ಆರ್ ತಯಾರಿಸಿ ಮೂಲ ಎಫ್.ಐ.ಆರ್ ಮತ್ತು ವರದಿಯನ್ನು ಮಾನ್ಯ ದೊಡ್ಡಬಳ್ಳಾಪುರ ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯಕ್ಕೆ ಕಳುಹಿಸಿ ಪ್ರತಿಗಳನ್ನು ಮೇಲಧಿಕಾರಿಗಳಿಗೆ ಕಳುಹಿಸಿದೆನು. ಈಗ ನನಗೆ ತೋರಿಸುತ್ತಿರುವ ಮೂಲ ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-31 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸುತ್ತಿರುವ ಮೂಲ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ-32 ಎಂದು ಹಾಗೂ ನಿಪಿ-32 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.

ಆರೋಪಿತರ ಬಳಿ ದೊರೆತ ಬಜಾಜ್ ಚೇತಕ್ ಸ್ಕೂಟರ್ ಕೆಎ-05 ಆರ್ 3975 ವಾಹನದಲ್ಲಿ ದೊರೆತ ಎರಡು ಕಬ್ಬಿಣದ ರಾಡುಗಳು, ಒಂದು ವೀಲ್ ಸ್ಪ್ಯಾನರ್, ಒಂದು ಕಬ್ಬಿಣದ ಚಾಕು ಇವುಗಳನ್ನು ಠಾಣಾ ಆವರಣದಲ್ಲಿ ಪಂಚರಾದ ಚಂದ್ರಶೇಖರಯ್ಯ ಮತ್ತು ಗೋವಿಂದರಾಜು ಇವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ 30/14ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ಮೂಲ ಮಹಜರನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ನಿಪಿ-33 ಎಂದು

ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ನಿಪಿ-33 ಮಹಜರನ್ನು ಬೆಳಗ್ಗೆ 6-15 ರಿಂದ 6-45 ಗಂಟೆವರೆಗೆ ಮಾಡಿರುತ್ತೇನೆ. ನಿಪಿ-33ರ ಮಹಜರ್ ಅಡಿ ವಶಪಡಿಸಿಕೊಂಡು ಮಾಲುಗಳನ್ನು ಮಾಲುಪಟ್ಟಿ ಸಂಖ್ಯೆ 30/14ಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ಕಡತದಲ್ಲಿನ ಸದರಿ ಮಾಲು ಪಟ್ಟಿ ಸಂಖ್ಯೆ 30/14ನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-34 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ನಿಪಿ-22 ಮತ್ತು 23 ಸ್ಕೂಟರ್‌ನ ಭಾವ ಚಿತ್ರಗಳನ್ನು ನೋಡುತ್ತಿದ್ದೇನೆ. ಅದೇ ರೀತಿ ನಿಪಿ-24 ಅಂತ ಗುರುತಿಸಿದ ಭಾವ ಚಿತ್ರ ನೋಡುತ್ತಿದ್ದೇನೆ. ಸದರಿ ಭಾವ ಚಿತ್ರದಲ್ಲಿರುವ ಆಯುಧಗಳನ್ನು ಮತ್ತು ನಿಪಿ-22 ಮತ್ತು 23 ರಲ್ಲಿ ಕಂಡು ಬರುವ ಸ್ಕೂಟರ್‌ನ್ನು ನಿಪಿ-33ರ ಅಡಿ ವಶಪಡಿಸಿಕೊಂಡಿದ್ದು ಇರುತ್ತವೆ.

ಮೇಲೆ ಹೇಳಿದ ಆರೋಪಿತರ ಅಂಗ ಶೋಧನೆ ಕಾಲಕ್ಕೆ ಆರೋಪಿ ಕೃಷ್ಣನಿಂದ ಪರಿಶೀಲನೆ ಸಮಯದಲ್ಲಿ ಆತನ ಪ್ಯಾಂಟ್ ಜೇಬಿನಲ್ಲಿದ್ದ ಒಂದು ಚಿನ್ನದ ಸರವನ್ನು ಪಂಚರಾದ ಚಂದ್ರಶೇಖರಯ್ಯ ಮತ್ತು ಗೋವಿಂದರಾಜು ಇವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿ ಅಮಾನತ್ತುಪಡಿಸಿಕೊಂಡು ಠಾಣಾ ಮಾಲು ಪಟ್ಟಿ ಸಂಖ್ಯೆ.31/14ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ಪ್ರಕರಣದ ಕಡತದಲ್ಲಿನ ಚಿನ್ನದ ಚೈನಿನ ಮಹಜರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್‌ನ್ನು ನಿಪಿ-35 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-

35(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಮಾಲು ಪಟ್ಟಿ ಸಂಖ್ಯೆ.31/14 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಾಲು ಪಟ್ಟಿ ಸಂಖ್ಯೆ.31/14ನ್ನು ನಿಪಿ-36 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು. ನಿಪಿ-35ರ ಅಡಿ ವಶಪಡಿಸಿಕೊಂಡ ಚಿನ್ನದ ಸರ ಠಾಣೆಯಲ್ಲಿಯೇ ಇರುತ್ತದೆ.

ನಂತರ ಆರೋಪಿತರಾದ ಕೃಷ್ಣ ಮತ್ತು ರಾಜೇಶ್‌ರವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ತಮ್ಮ ಇತರೆ ಸ್ನೇಹಿತರೊಂದಿಗೆ ಕೂಡಿ ದಾಬಾಸ್‌ಪೇಟೆ ಪೋಲೀಸ್ ಠಾಣೆಗೆ ಸಂಬಂಧಪಟ್ಟ ಈ ಪ್ರಕರಣ ಹಾಗೂ ಇನ್ನೊಂದು ಪ್ರಕರಣ, ರಾಮನಗರ, ಬಿಡದಿ ಪೋಲೀಸ್ ಠಾಣೆಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಭಾಗಿಯಾಗಿರುವ ಕುರಿತು ಮತ್ತು ತಮ್ಮನ್ನು ಕರೆದುಕೊಂಡು ಹೋದಲ್ಲಿ ಕೃತ್ಯದ ಸ್ಥಳಗಳನ್ನು ಹಾಗೂ ಇತರೇ ಆರೋಪಿತರನ್ನು ತೋರಿಸುವುದಾಗಿ ನುಡಿದಿರುತ್ತಾರೆ.

ಅದೇ ದಿನ ಸದರಿ ಆರೋಪಿತರ ಸ್ವಇಚ್ಛಾ ಹೇಳಿಕೆಗಳ ಆಧಾರದ ಮೇಲೆ ನೆಲಮಂಗಲದ ಹುಣಸೇ ಮರ ಕ್ರಾಸ್ ಬಳಿ ಇನ್ನಿಬ್ಬರು ಆರೋಪಿತರಾದ ಚಂದ್ರ ಮತ್ತು ನವೀನ್‌ನನ್ನು ಮದ್ಯಾಹ್ನ ವಶಕ್ಕೆ ಪಡೆದು ಠಾಣೆಗೆ ಬಂದು ಅವರನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿದೆನು. ನಂತರ ಸದರಿ ಚಂದ್ರ ಅಲಿಯಾಸ್ ಚಂದ್ರಶೇಖರ್ ಮತ್ತು ನವೀನ್‌ರವರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಚಂದ್ರ ಅಲಿಯಾಸ್ ಚಂದ್ರಶೇಖರ್ ಮತ್ತು

ನವೀನ್ ಆರೋಪಿತರು ಸಹ ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ಕೃಷ್ಣ ಮತ್ತು ರಾಜೇಶ್ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ಹೇಳಿರುವಂತೆ ಹೇಳಿರುತ್ತಾರೆ. ಆರೋಪಿ ಕೃಷ್ಣ, ರಾಜೇಶ್, ಚಂದ್ರಶೇಖರ್ ಹಾಗೂ ನವೀನ್ ಇವರುಗಳು ಪ್ರತಿಯೊಬ್ಬರೂ ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ "ನನ್ನನ್ನು ಕರೆದುಕೊಂಡು ಹೋದಲ್ಲಿ ನನ್ನ ಜೊತೆಯಲ್ಲಿದ್ದ ಎಲ್ಲಾ ಆಸಾಮಿಗಳನ್ನು ಮತ್ತು ನಾವು ಮಾಡಿದ ಜಾಗಗಳನ್ನು ತೋರಿಸುತ್ತೇನೆ" ಅಂತ ಹೇಳಿದ್ದು ಸದರಿ ಆರೋಪಿತರ ಸ್ವಇಚ್ಛಾ ಹೇಳಿಕೆಗಳಲ್ಲಿನ ಸದರಿ ಭಾಗಗಳನ್ನು ಅನುಕ್ರಮವಾಗಿ ನಿಪಿ-37, 38, 39 ಮತ್ತು 40 ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಸದರಿ ನಾಲ್ಕು ಜನ ಆರೋಪಿತರನ್ನು ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಅವರುಗಳನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡೆನು. ನಂತರ ಅದೇ ದಿನ ಪಿಸಿ- ಬಕ್ಕಲ್ ನಂ.926 ಬಲರಾಂರವರ ಹೇಳಿಕೆ ಪಡೆದಕೊಂಡೆನು.

ದಿನಾಂಕ 26.02.2014 ರಂದು ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35/14 ರಲ್ಲಿ ಪಿರ್ಯಾದುದಾರರಾದ ಶ್ರೀ ರಘು ಮತ್ತು ಅವರ ಜೊತೆಯಲ್ಲಿದ್ದ ಸಂತೋಷರವರನ್ನು ಠಾಣೆಗೆ ಕರೆಯಿಸಿ ಸದರಿ ನಾಲ್ಕು ಜನ ಆರೋಪಿತರನ್ನು ತೋರಿಸಿದ್ದು ಅವರು ಆರೋಪಿತರನ್ನು ಗುರುತಿಸಿದ್ದು ಈ ಸಂಬಂಧದಲ್ಲಿ ಅವರ ಹೇಳಿಕೆಗಳನ್ನು ಪಡೆದುಕೊಂಡೆನು.

ನಂತರ ಉಳಿದ ಆರೋಪಿತರ ಪತ್ತೆಗಾಗಿ ದಿನಾಂಕ 01.03.2014 ರಂದು ಪಿಸಿ 1381 ಜಯರಾಂ, ಪಿಸಿ-1241 ಗಂಗಾಧರ್ ಇವರನ್ನು ನೇಮಿಸಿದ್ದೆನು. ಇವರು ಆರೋಪಿಯಾದ ಚಂದೂ ರಾಥೋಡ್ ಈತನನ್ನು ತುಮಕೂರಿನ ಅರಕೆರೆ ಬಳಿ ಇದ್ದವನನ್ನು ಬೆಳಗಿನ ಜಾವ ಹಿಡಿದುಕೊಂಡು ನನ್ನ ಮುಂದೆ ಠಾಣೆಯಲ್ಲಿ ಬೆಳಗ್ಗೆ 7.30 ಗಂಟೆಗೆ ಹಾಜರುಪಡಿಸಿದರು. ನಂತರ ಸದರಿ ಆರೋಪಿತನನ್ನು ವಿಚಾರ ಮಾಡಿ ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿದೆನು. ನಂತರ ಸದರಿ ಆರೋಪಿತನ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ಸದರಿ ಆರೋಪಿತನು ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ "ನನ್ನನ್ನು ಕರೆದುಕೊಂಡು ಹೋದರೆ ……… ಸ್ಥಳವನ್ನು ತೋರಿಸುತ್ತೇನೆ" ಹೇಳಿದ್ದು ಆರೋಪಿತನ ಸ್ವಇಚ್ಛಾ ಹೇಳಿಕೆಯಲ್ಲಿನ ಸದರಿ ಭಾಗವನ್ನು ನಿಪಿ-41 ಎಂದು ಗುರುತಿಸಲಾಯಿತು. ನಂತರ ಅದೇ ದಿನ ಸದರಿ ಆರೋಪಿತನನ್ನು ಎ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ ದೊಡ್ಡಬಳ್ಳಾಪುರದ ನ್ಯಾಯಾಲಯಕ್ಕೆ ಹಾಜರುಪಡಿಸಿ ಆತನನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡೆನು.

ದಿನಾಂಕ 02.03.2014 ರಂದು ಮೇಲೆ ಹೇಳಿದ ಐದೂ ಜನ ಆರೋಪಿತರು ತಮ್ಮ ಸ್ವಇಚ್ಛಾ ಹೇಳಿಕೆಗಳಲ್ಲಿ ದಾಬಾಸ್‌ಪೇಟೆ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ 35/14 ರಲ್ಲಿ ಸಂಬಂಧಿಸಿದಂತೆ ದಾಬಾಸ್‌ಪೇಟೆ ಟೌನ್ ಹೆಚ್ ಡಿ ಎಫ್ ಸಿ ಬ್ಯಾಂಕ್ ಎ ಟಿ ಎಂ ನಲ್ಲಿ ಹಣ ಡ್ರಾ ಮಾಡಿದ ಬಗ್ಗೆ ತಿಳಿಸಿದ್ದು ಸದರಿ ಸ್ಥಳಕ್ಕೆ ಸದರಿ ಆರೋಪಿತರೊಂದಿಗೆ ಹೋಗಿ ಅಲ್ಲಿ ಪಂಚರಾದ ವೆಂಕಟಾಚಲಯ್ಯ ಮತ್ತು

ಮಂಜು ಬಿನ್ ಗಂಗಯ್ಯ, ಮಂಜುನಾಥ ಬಿನ್ ರಾಜಶೇಖರಯ್ಯರವರ ಸಮಕ್ಷಮ ಮಹಜರ್ ಜರುಗಿಸಿದೆನು.

ದಿನಾಂಕ 02.03.2014 ರಂದು ನೆಲಮಂಗಲ ತಾಲ್ಲೂಕು ಸೋಮಪುರ ಹೋಬಳಿ ಹಳೇ ನಿಜಗಲ್ ಗೇಟಿನ ಬಳಿ ಇರುವ ಮಲ್ಲಿಕಾರ್ಜುನಯ್ಯನವರ ಜಮೀನಿನ ಪಕ್ಕದಲ್ಲಿ ಹಾದು ಹೋಗಿರುವ ಬೆಂಗಳೂರು – ತುಮಕೂರು ಎನ್ ಹೆಚ್ -4 ರಸ್ತೆ ಬದಿಯಲ್ಲಿರುವ ಬಸ್ ಶೆಲ್ಟರ್ ಬಳಿ ನಮ್ಮನ್ನು ಮತ್ತು ಪಂಚಾಯತ್‌ದಾರರಾದ ಮಂಜುನಾಥ ಬಿನ್ ರಾಜಶೇಖರಯ್ಯ, ಲೋಕೇಶ್ ಬಿನ್ ಶಂಕರಪ್ಪ, ಮಂಜುನಾಥ ಬಿನ್ ಗಂಗಯ್ಯ ಇವರುಗಳನ್ನು ಕೃತ್ಯವೆಸಗಿದ ಸ್ಥಳಕ್ಕೆ ಕರೆದುಕೊಂಡು ಹೋದರು. ಸದರಿ ಸ್ಥಳ ಪರಿಶೀಲನೆ ಮಾಡಿದೆನು. ನಂತರ ಆರೋಪಿತರು ಕೃತ್ಯಕ್ಕೆ ಬಳಸಿದ ರಾಡು ಮತ್ತು ಮೂರು ಬ್ಲೇಡುಗಳನ್ನು ಕೃತ್ಯ ನಡೆಸಿದ ಸ್ಥಳದಿಂದ ದಕ್ಷಿಣ ದಿಕ್ಕಿಗೆ ಸುಮಾರು 90 ಮೀಟರ್ ದೂರ ಹೋಗಿ ಸದರಿ ಸ್ಥಳದಲ್ಲಿಯೇ ಲಾರಿ ಚಾಲಕನಿಗೆ ಹೊಡೆದು ಆತನ ಮೈಮೇಲಿದ್ದ ಬಟ್ಟೆಗಳಿಂದಲೇ ಆತನ ಕೈ ಕಾಲುಗಳನ್ನು ಕಟ್ಟಿ ಹಾಕಿದ ಸ್ಥಳ ಎಂದು ತೋರಿಸಿದರು. ಸದರಿ ಸ್ಥಳದಲ್ಲಿ ರಕ್ತ ಬಿದ್ದು ಒಣಗಿದ ನಿಶಾನೆ ಕಂಡು ಬಂದಿತ್ತು. ಸದರಿ ಸ್ಥಳದಿಂದ 18 ಮೀಟರ್ ಅಂತರದಲ್ಲಿ ರೈಲ್ವೆ ಹಳಿ ಇತ್ತು. ಸದರಿ ಸ್ಥಳದಿಂದ 30 ಮೀಟರ್ ಅಂತರದಲ್ಲಿ ರೈಲ್ವೆ ಹಳಿ ಕ್ರಾಸಿಂಗ್ ಇತ್ತು. ಕೃತ್ಯ ನಡೆದ ಸ್ಥಳದಿಂದ ಉತ್ತರದ ಕಡೆಗೆ 25 ಅಡಿ ದೂರದಲ್ಲಿರುವ ಹುಲ್ಲಿನ ಪೊದೆಯಲ್ಲಿ ಚಾಲಕನಿಗೆ ಹೊಡೆದು ಕೊಯ್ದು ಬಿಸಾಕಿದ ರಾಡು ಮತ್ತು ಮೂರು ಬ್ಲೇಡ್‌ಗಳನ್ನು

ಆರೋಪಿತರ ಪೈಕಿ ಚಂದು ರಾಥೋಡ್ ಮತ್ತು ರಾಜೇಶ್ ಎತ್ತಿ ಕೊಟ್ಟರು. ಅವುಗಳನ್ನು ಬಿಳಿ ಚೀಲಗಳಲ್ಲಿ ಪ್ರತ್ಯೇಕವಾಗಿ ಹಾಕಿ "ವಿ" ಎಂಬ ಅಕ್ಷರದಿಂದ ಸೀಲು ಮಾಡಿ ಮುಂದಿನ ತನಿಖೆಗಾಗಿ ಅಮಾನತ್ತುಪಡಿಸಿಕೊಂಡೆನು. ಈ ಕುರಿತು ನಿಪಿ-25 ರಲ್ಲಿ ಕಾಣಿಸಿದಂತೆ ರನ್ನಿಂಗ್ ಮಹಜರ್ ಬರೆದು ಪಂಚರ ಸಹಿ ಪಡೆದುಕೊಂಡೆನು. ಈಗ ನನಗೆ ತೋರಿಸುತ್ತಿರುವ ನಿಪಿ-25 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ -25 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ನ್ಯಾಯಾಲಯದ ವಿಶ್ರಾಂತಿ ವೇಳೆ ಆದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

ನಿಪಿ-25 ರಡಿ ಅಮಾನತ್ತುಪಡಿಸಿಕೊಂಡ ಆಯುಧಗಳನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 37/14 ರಲ್ಲಿ ಆಳವಡಿಸಿಕೊಳ್ಳಲು ನ್ಯಾಯಾಲಯದ ಪರವಾನಿಗೆ ಪಡೆದುಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿ ಸಂಖ್ಯೆ 37/14 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿಪಿ-42 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು. ನಿಪಿ-25 ಮಹಜರ್ ಅಡಿ ವಶಪಡಿಸಿಕೊಂಡ ಆಯುಧಗಳನ್ನು ತೋರಿಸಿದಲ್ಲಿ ಗುರುತಿಸುತ್ತೇನೆ. ಈಗ ನನಗೆ ತೋರಿಸುತ್ತಿರುವ ಮು ಮಾ 6, 7, 8- ಸ್ಟಿಕರ್ ಕಟರ್ ಬ್ಲೇಡ್‌ಗಳು ಮತ್ತು ಮು ಮಾ 12 ರಾಡು ನೋಡುತ್ತಿದ್ದು ಇವುಗಳನ್ನೇ ನಿಪಿ-25 ರಡಿ ಅಮಾನತ್ತುಪಡಿಸಿಕೊಂಡಿದ್ದೆನು.

ದಿನಾಂಕ 02.03.2014 ರಂದೇ ಪಂಚಾಯ್ತಿದಾರರಾದ ಮಂಜುನಾಥ ಬಿನ್ ರಾಜಶೇಖರಯ್ಯ, ಮಂಜುನಾಥ ಬಿನ್ ಗಂಗಯ್ಯ, ಲೋಕೇಶ್ ಬಿನ್ ಶಂಕರಪ್ಪ ಇವರುಗಳ ಹೇಳಿಕೆಗಳನ್ನು ಪಡೆದುಕೊಂಡೆನು. ಮಂಜುನಾಥ ಬಿನ್ ಗಂಗಯ್ಯ ಈತನು ನನ್ನ ಮುಂದೆ ನಿಪಿ-27 ರಂತೆ ಹೇಳಿಕೆ ನೀಡಿದ್ದಾನೆ.

ದಿನಾಂಕ 03.03.2014 ರಂದು ಐದೂ ಜನ ಆರೋಪಿಗಳನ್ನು ದೊಡ್ಡಬಳ್ಳಾಪುರ ಸಿ ಜೆ ಎಂ ನ್ಯಾಯಾಲಯಕ್ಕೆ ಹಾಜರುಪಡಿಸಿ ಸದರಿಯವರನ್ನು ನ್ಯಾಯಾಂಗ ಬಂಧನದಲ್ಲಿಡಲು ಕೋರಿಕೆ ಪತ್ರ ಸಲ್ಲಿಸಿದೆನು. ಈಗ ನ್ಯಾಯಾಲಯದ

ಮುಂದಿದ್ದ ಈ ಪ್ರಕರಣದ ಆರೋಪಿತರ ಪೈಕಿ 1ನೇ ಆರೋಪಿ ರಾಜೇಶ್, 2ನೇ ಆರೋಪಿ ಕೃಷ್ಣ, 5ನೇ ಆರೋಪಿ ಚಂದು ರಾಥೋಡ್ ಇವರುಗಳನ್ನು ನೋಡುತ್ತಿದ್ದು ಇವರುಗಳನ್ನೇ ನಾನು ಬಂಧಿಸಿ ಪೋಲೀಸ್ ವಶಕ್ಕೆ ಪಡೆದಿದ್ದೆನು. 4ನೇ ಆರೋಪಿ ಚಂದ್ರಶೇಖರ್‌ನನ್ನು ತೋರಿಸಿದಲ್ಲಿ ಗುರುತಿಸುತ್ತೇನೆ.

ದಿನಾಂಕ 10.03.2014 ರಂದು ಕೃತ್ಯಗಳು ನಡೆದ ಸ್ಥಳಗಳ ಆಧಾರದ ಮೇಲೆ ಕಡತವನ್ನು ವರ್ಗಾವಣೆ ನೀಡಲು ನ್ಯಾಯಾಲಯದ ಅನುಮತಿಯನ್ನು ಪಡೆದಿರುತ್ತೇನೆ. ದಿನಾಂಕ 25.03.2014 ರಂದು ಕೃತ್ಯ ನಡೆದ ಸ್ಥಳದ ಆಧಾರದ ಮೇಲೆ ನೆಲಮಂಗಲ ವೃತ್ತ ನಿರೀಕ್ಷಕರಿಗೆ ಕಡತವನ್ನು ವರ್ಗಾವಣೆ ಮಾಡಿದೆನು. ಈಗ ನನಗೆ ತೋರಿಸುತ್ತಿರುವ ಕಡತದಲ್ಲಿನ ನಿಪಿ-16 ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ನಿಪಿ-16 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು 1, 4, 5ನೇ ಆರೋಪಿತರ ಪರ ಶ್ರೀ ಜಿ ಎಸ್ ಬಿ ವಕೀಲರಿಂದಃ-**

(ಶ್ರೀ ಜಿ ಎಸ್ ಬಿ ವಕೀಲರ ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು).

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ ಹೇ ಸಾ ಸ ಸಹಿ ಮಾಡಿದ್ದಾರೆ.

1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.